ಶ್ರೀ ಡಿ.ಬಿ. ಚಂದ್ರೇಗೌಡ:—ಇಷ್ಟೆಲ್ಲಾ ಹೇಳಿದಮೇಲೆ ಡಿಫೆನ್ಸ್‌ನೋ ಅಥವಾ ನಮ್ಮ ಮಾತಿಗೆ ಏನಾದರೂ ಬೆಲೆ ಇದೆಯೋ? ಈಗ ಸಭಾ ನಾಯಕರು ಏನೋ ಹೇಳುತ್ತಾರೆ ಕೇಳೋಣ.

ಶ್ರೀ ಕೆ.ಜೆ. ಜಾರ್ಜ್:—ನಿಮ್ಮ ಮಾತು, ನಮ್ಮ ಪಕ್ಷದವರ ಮಾತು ಇದನ್ನು ಮೊದಲೇ ಕೇಳಿಕೊಂಡು ನಮ್ಮ ಸಭಾನಾಯಕರು ಆದೇಶ ಕೊಟ್ಟ ಪ್ರಕಾರ ಈಗಾಗಲೇ ಎರಡು ಬಾರಿ ದರ ಇಳಿಸಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಒಂದು ಬಾರಿ ನಗರಕ್ಕೆ ಒಂದು ಬಾರಿ ಗ್ರಾಮಾಂತರಕ್ಕೆ ದರ ಇಳಿಸಿದ್ದೀರಿ. ಅದನ್ನು ಎರಡು ಬಾರಿ ಆಸ್ಮತ್ತೀರಾ ?

ಶ್ರೀ ಪಿ.ಜಿ ಆರ್.ಸಿಂಧ್ಯ.—ಕೇವಲ ನಾಲ್ಕಾಣೆ ಕಡಿಮೆ ಮಾಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದರಿಂದ ಏನೂ ಪ್ರಯೋಜನ ಇಲ್ಲ. ೧೦೦ಕ್ಕೆ ೧೦೦ ರಷ್ಟು ಹೆಚ್ಚಿಸಿದ್ದೀರಿ.

ಶ್ರೀ ಕೆ.ಜೆ. ಜಾರ್ಜ್.—ಯಡಿಯೂರಪ್ಪನವರೇ ೧೦೦ಕ್ಕೆ ೧೦೦ರಷ್ಟು ನಾವು ಹೆಚ್ಚಿಸಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಎಕ್ಸ್‌ಪ್ರೆಸ್, ಅರ್ಜೆನರಿಗೆ ಸಬ್‌ಅರ್ಬನ್‌ಗೆ ಮತ್ತು ಸಿಟಿ ಸರ್ವಿಸ್‌ಗೆ ಶೇಕಡಾ ೨೫ರಷ್ಟು ಇಳಿಸಿದ್ದೇವೆ. ಮತ್ತೆ ೫೫ ಪೈಸೆಗೆ ರೌಂಡ್‌ಆಫ್ ಮಾಡುವುದಕ್ಕೆ ಆರ್ಡರ್ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾನು ಮನವಿ ಮಾಡುತ್ತೇನೆ. ಈ ಸಭೆಯು ಒತ್ತಾಯಕ್ಕೋಸ್ಕರ ಮೂರನೇ ಬಾರಿ ದರ ಇಳಿಸಿಬಿಡಿ.

ಶ್ರೀ ಎಂ. ಪಿ. ವೆಂಕಟೇಶ್:—ಎಲ್ಲ ಸದಸ್ಯರೂ ಚರ್ಚೆ ಮಾಡಿದ ಅನೇಕ ವಿಷಯಗಳನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ ಈ ವಿಷಯದಲ್ಲಿ ವಿತಕ್ಕೆ ತರ್ಕ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:—ಎರಡು ಬಾರಿ ಇಳಿಸಿದ್ದೇವೆ, ಎರಡು ಬಾರಿ ಇಳಿಸಿದ್ದೇವೆ ಎಂದು ಹತ್ತು ಸಾರಿ ಹೇಳಿದ್ದಾರೆ. ನಾನೂ ಲೆಕ್ಕ ಮಾಡುತ್ತಲೇ ಇದ್ದೇನೆ. ಆದರೆ ಅವರು ಇಳಿಸಿರುವುದು ಒಂದೇ ಬಾರಿ. ಈಗ ಮತ್ತೆ ಇಳಿಸಿದರೆ ಎರಡು ಬಾರಿಯಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ಸಾಕಷ್ಟು ಸಲಹೆಗಳನ್ನು ವಿರೋಧ ಪಕ್ಷದ ನಾಯಕರ ಮತ್ತು ಉಪನಾಯಕರು ಹಾಗೂ ಸನ್ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ. ಅವರಿಗೆಲ್ಲಾ ಒಂದು ಭರವಸೆ ಕೊಡುತ್ತಿದ್ದೇನೆ. ನಾವಾಗಲೀ, ನಮ್ಮ ಸರ್ಕಾರವಾಗಲೀ ಪ್ರಾಮಾಣಿಕ ರೀತಿಯಿಂದ ಕೆ ಎಸ್.ಆರ್.ಟಿ.ಸಿ. ಯನ್ನು ಸಾರ್ವಜನಿಕರಿಗಾಗಿ ನಡೆಸುತ್ತಿದ್ದೇವೆ ಹಾಗೂ ಅವರಿಗೆ ಸಾಕಷ್ಟು ಸೌಲಭ್ಯಗಳನ್ನು ಕೊಡುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿ ದಕ್ಷತೆಯಿಂದ ನಡೆಸಿಕೊಂಡು ಹೋಗುತ್ತೇವೆ ಎಂಬ ಮಾತನ್ನು ಹೇಳುತ್ತೇನೆ.

(ಹಲವಾರು ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದರು. ಗೊಂದಲವಾಯಿತು.)

ಶ್ರೀ ಬಿ.ಎಸ್. ಯಡಿಯೂರಪ್ಪ.—ಇದು ರೈತ ವಿರೋಧಿ ಸರ್ಕಾರ. ಶ್ರೀಸಾಮಾನ್ಯನಿಗೆ ಇವರಿಂದ ಅನುಕೂಲವಾಗುತ್ತಿಲ್ಲ. ಈ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ವಾಕ್ ಔಟ್ ಮಾಡುತ್ತಿದ್ದೇವೆ.

(ಸಭಾತ್ಯಾಗ ಮಾಡಲು ಅರ್ಧ ದಾರಿಗೆ ಹೋಗಿದ್ದ ಬಿ.ಜೆ.ಪಿ. ಸದಸ್ಯರಿಗೆ ಜನತಾ ದಳದ ಸದಸ್ಯರು ಮುಖ್ಯಮಂತ್ರಿಗಳು ಮಾತನಾಡುತ್ತಾರೆ ಬನ್ನಿ ಎಂದಾಗ ವಾಪಸ್ ಬಂದರು.)

ಶ್ರೀ ವಾಟಾಳ್ ನಾಗರಾಜ್.—ನಮ್ಮ ಮುಂದಿನ ಕಾರ್ಯಕ್ರಮ ಸಭಾತ್ಯಾಗ. ಅದು ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಸಭಾತ್ಯಾಗ ಮಾಡಿಸುವುದು ಒಳ್ಳೆಯದಲ್ಲ, ಸಭಾತ್ಯಾಗ ಆಗದೇ ಇರುವ ರೀತಿಯಲ್ಲಿ ಉತ್ತರ ಕೊಡಿ.

೪.೧೫ ಪಿ.ಎಂ.

†ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಉಪಾಧ್ಯಕ್ಷೆಯವರೇ, ಬಸ್ ದರ ಏರಿಕೆ ಬಗ್ಗೆ ಸರ್ಕಾರದ ಗಮನ ಸೆಳೆಯುವ ಅವಕಾಶವನ್ನು ವಿರೋಧ ಪಕ್ಷದ ನಾಯಕರುಗಳು ಪೂರ್ತಿಯಾಗಿ ಉಪಯೋಗಿಸಿಕೊಂಡಿದ್ದಾರೆ. ಮತ್ತು ಅವರು ಹೇಳಬೇಕಾದಂಥ ಎಲ್ಲಾ ವಿಚಾರಗಳನ್ನೂ